ಆ) ಬಂದಿದ್ದಲ್ಲಿ, ಅಂತಹ ಕಂಪನಿಗಳ ವಿರುದ್ದ ಸರ್ಕಾರ ಕೈಗೊಂಡ ಕ್ರಮವೇನು?

ಇ) ಉದ್ಯೋಗ ಕಳೆದುಕೊಂಡ ಬಹುತೇಕ ಮಂದಿ ನಮ್ಮ ರಾಜ್ಯದವರಾಗಿದ್ದು, ಬದಲಿ ಉದ್ಯೋಗ ದೊರಕದೆ ನಿರುದ್ಯೋಗಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಕೆಲಸ ಕಳೆದುಕೊಂಡ ವಿದ್ಯಾವಂತರ ರಕ್ಷಣೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಸ್.ಆರ್. ಪಾಟೀಲ್ (ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಹಿಂದುಳಿದ ಆಯೋಗದಿಂದ ಜನಗಣತಿ

2732 (3243); ಶ್ರೀ ಮಂಜುನಾಥ ಗೌಡ ಕೆ.ಎಸ್. (ಮಾಲೂರು)

ಅ) ರಾಜ್ಯದಲ್ಲಿ ಹಿಂದುಳಿದ ಆಯೋಗದ ವತಿಯಿಂದ ಜಾತಿವಾರು ಜನಗಣತಿ ಮಾಡಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ ಜಾತಿವಾರು ಜನಗಣತಿಯಲ್ಲಿ ಜನತೆಯಿಂದ ಪಡೆಯುವ ಮಾಹಿತಿಗಳು ಯಾವುವು ಹಾಗೂ ಇದರ ಉದ್ದೇಶಗಳೇನು; ಜಾತಿವಾರು ಜನಗಣತಿಗೆ ವೆಚ್ಚವಾಗುವ ಹಣವೆಷ್ಟು ಹಾಗೂ ಇದಕ್ಕೆ ಬಳಕೆ ಮಾಡಲಾಗುತ್ತಿರುವ ಸಿಬ್ಬಂದಿಗಳು ಯಾರು (ವೃಂದವಾರು ಮಾಹಿತಿ ನೀಡುವುದು)

ಇ) ಜನಗಣತಿಯನ್ನು ಯಾವ ಅವಧಿಯಲ್ಲಿ ಮಾಡಲಾಗುವುದು ಹಾಗೂ ಯಾವ ಕಾಲಾವಧಿಯಲ್ಲಿ ಮುಕ್ತಾಯಗೊಳಿಸಲಾಗುವುದು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಕೈಗೊಳ್ಳಲಾಗುತ್ತಿದೆ.

ಆ) ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಮನೆ–ಮನೆ ಸಮೀಕ್ಷೆಯನ್ನು ಕೈಗೊಳ್ಳಲಾಗುತ್ತಿದೆ.

ಸಮೀಕ್ಷೆಯಲ್ಲಿ ಪಡೆಯುವ ಮಾಹಿತಿಗಳು:

ಕುಟುಂಬದ ಮುಖ್ಯಸ್ಥರು ಮತ್ತು ಸದಸ್ಯರು, ಪ್ರತಿಯೊಬ್ಬ ಸದಸ್ಯರು ಕುಟುಂಬದ ಮುಖ್ಯಸ್ಥರೊಂದಿಗೆ ಹೊಂದಿರುವ ಸಂಬಂಧ, ಲಿಂಗ, ಧರ್ಮ, ಜಾತಿ, ವಯಸ್ಸು, ಮಾತೃ ಭಾಷೆ, ಆಧಾರ್ ಕಾರ್ಡ್ ಸಂಖ್ಯೆ, ಚುನಾವಣೆ ಗುರುತಿನ ಚೀಟಿ ಸಂಖ್ಯೆ, ಬ್ಯಾಂಕ್ ಅಕೌಂಟ್ ಹೊಂದಿರುವುದು, ಪಡಿತರ ಚೀಟಿ ಹೊಂದಿರುವುದು, ಅಂಗವಿಕಲತೆ, ವೈವಾಹಿಕ ಸ್ಥಾನಮಾನ, ವಿವಾಹ ಆದ ಸಮಯದಲ್ಲಿ ವಯಸ್ಸು, ಮನೆಯ ಪರಿಸರ, ವಾಸವಿರುವ ಮನೆಯ ವಿಧ ಮತ್ತು ಮಾಲಿಕತ್ವ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ದೀಪದ ಮೂಲ, ಅಡಿಗೆ ತಯಾರಿಕೆಗೆ ಬಳಸುವ ಇಂಧನ, ಶಾಲೆಯ ವಿಧ, ಶಾಲೆಗೆ ಸೇರಿದಾಗ ವಯಸ್ಸು, ಗರಿಷ್ಠ ವಿದ್ಯಾರ್ಹತೆ, ಅನಕ್ಷರತೆಗೆ ಕಾರಣ, ಶಾಲೆ ಬಿಟ್ಟಾಗಿನ ತರಗತಿ ಮತ್ತು ವಯಸ್ಸು (6 ರಿಂದ 16 ವಯಸ್ಸಿನ ಮಕ್ಕಳು) ಶಾಲೆ ಬಿಡಲು ಕಾರಣ, 17 ರಿಂದ 40 ವಯಸ್ಸಿನವರು ಶಿಕ್ಷಣ ಮುಂದುವರೆಸದೇ ಇರಲು ಕಾರಣ, ಉದ್ಯೋಗದ ವಿವರ, ಸಾಂಪ್ರದಾಯಿಕ ಕಸುಬು (ಕುಲಕಸುಬು), ಅಸಂಘಟಿತ ಕ್ಷೇತ್ರದಲ್ಲಿ ದಿನಗೂಲಿ ಕೆಲಸಗಾರರು, ವೃತ್ತಿ ಸಂಬಂಧ ಕಾಯಿಲೆಗಳು, ಸರ್ಕಾರಿ ಹಾಗೂ ಖಾಸಗಿ ಸೇವೆ, ಸ್ವಯಂ ಉದ್ಯೋಗ, ರಾಜ್ಯ ವಿಧಾನ ಸಭೆ/ ವಿಧಾನ ಪರಿಷತ್ತು, ಲೋಕಸಭೆ/ ರಾಜ್ಯಸಭೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ, ನಿಗಮ, ಮಂಡಳಿ ಹಾಗೂ ಸಹಕಾರಿ ಕ್ಷೇತ್ರದಲ್ಲಿ

ಪ್ರಾತಿನಿಧ್ಯ, ವಾರ್ಷಿಕ ಆದಾಯ, ಆದಾಯ ತೆರಿಗೆ ಪಾವತಿ, ಭೂ ಹಿಡುವಳಿ, ನೀರಾವರಿ ಸೌಲಭ್ಯ, ಪ್ರಮುಖ ಬೆಳೆಗಳು, ಕುಟುಂಬದ ಸಾಲ, ಕೃಷಿಯೇತರ ಚಟುವಟಿಕೆಗಳು, ಜಾನುವಾರುಗಳ ಸಂಖ್ಯೆ, ಕುಟುಂಬದ ಸ್ಥಿರ ಹಾಗೂ ಚರಾಸ್ತಿ ಇತ್ಯಾದಿ.

ಸಮೀಕ್ಷೆ ಉದ್ದೇಶ:

ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ನಾಗರೀಕರನ್ನು ಗುರುತಿಸಿ ಸೂಕ್ತ ಮೀಸಲಾತಿ ನೀತಿ ರೂಪಿಸಲು ಹಾಗೂ ಸ್ಥಿತಿಗತಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅವರ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

ಸಮೀಕ್ಷೆಗೆ ಇದುವರೆಗೆ 32.71 ಕೋಟಿ ಬಿಡುಗಡೆ ಆಗಿದ್ದು ಪೂರಕ ಅಂದಾಜು–2ರಲ್ಲಿ ₹ 84.00 ಕೋಟಿಗಳನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆ ಒಪ್ಪಿದ್ದು 2015–16ನೇ ಸಾಲಿಗೆ 75.00 ಕೋಟಿ ರೂ.ಗಳ ಅನುದಾದನ ಬೇಕಾಗುತ್ತದೆ.

ಈ ಸಮೀಕ್ಷೆಗಾಗಿ ವಿವಿಧ ಹಂತದಲ್ಲಿ ನೇಮಕ ಮಾಡಲಾದ ಅಧಿಕಾರಿ ಮತ್ತು ಸಿಬ್ಬಂದಿ ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ದಿನಾಂಕ: 11.04.2015 ರಿಂದ 30.04.2015 ರವರೆಗೆ

ಅನುಬಂಧ–1

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ರಾಜ್ಯಾದ್ಯಂತ ಕೈಗೊಳ್ಳಲಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಮನೆ–ಮನೆ ಸಮೀಕ್ಷೆಗೆ ನೇಮಕವಾಗಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ವಿವರ.

1	ಪ್ರಧಾನ ಸಮೀಕ್ಷಾಧಿಕಾರಿಗಳು (ಜಿಲ್ಲಾಧಿಕಾರಿಗಳು ಮತ್ತು ಆಯುಕ್ತರು, ಬಿಬಿಎಂಪಿ)		31
2	ಹೆಚ್ಚುವರಿ ಪ್ರಧಾನ ಸಮೀಕ್ಷಾಧಿಕಾರಿಗಳು (ಬಿಬಿಎಂಪಿಯ ಜಂಟಿ ಆಯುಕ್ತರು (ಆಡಳಿತ) ಮತ್ತು 8 ವಲಯದ ಜಂಟಿ ಆಯುಕ್ತರು, 10 ಮಹಾನಗರ ಪಾಲಿಕೆ ಆಯುಕ್ತರು, ಅಪರ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿ.ಪಂ,)		79
3	ಉಪ ವಿಭಾಗದ ಸಮೀಕ್ಷಾಧಿಕಾರಿಗಳು		52
4	ಜಿಲ್ಲಾ ಸಮೀಕ್ಷಾಧಿಕಾರಿಗಳು (ಸಮನ್ವಯ), –ಜಿಲ್ಲಾ ಹಿಂ.ವ.ಕ. ಅಧಿಕಾರಿಗಳು		30
5	ಜಿಲ್ಲಾ ಸಮೀಕ್ಷಾಧಿಕಾರಿಗಳು (ತಾಂತ್ರಿಕ), ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ		30
6	ಜಾರ್ಜ್ ಅಧಿಕಾರಿಗಳು		727
	ತಾಹಸೀಲ್ದಾರ್–ಗ್ರೇಡ್1	176	
	ಕಂದಾಯ ಅಧಿಕಾರಿಗಳು, ಬಿಬಿಎಂಪಿ	199	
	ಕಂದಾಯ ಅಧಿಕಾರಿಗಳು 10 ಮಹಾನಗರ ಪಾಲಿಕೆ	144	
	ಆಯುಕ್ತರು ನಗರ ಸಭೆ	41	
	ಮುಖ್ಯಾಧಿಕಾರಿ ಪುರಸಭೆ (ಟಿಎಂಸಿ)	94	
	ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯ್ತಿ	68	
	ಅಧಿಸೂಚಿತ ಪ್ರದೇಶಗಳು	5	
7	ಹೆಚ್ಚುವರಿ ಜಾರ್ಜ್ ಅಧಿಕಾರಿಗಳು		560
	ತಾಹಸೀಲ್ದಾರ್–ಗ್ರೇಡ್2	176	
	ವಾರ್ಡ್ ಕಛೇರಿ, ಬಿಬಿಎಂಪಿ	199	
	ಅಧಿಕಾರಿಗಳು 10 ಮಹಾನಗರ ಪಾಲಿಕೆ	144	
	ಆಯುಕ್ತರು ನಗರ ಸಭೆ	41	
8	ಎ) ನೋಡಲ್ ಅಧಿಕಾರಿ(ಸಮೀಕ್ಷೆ) ಬಿ.ಬಿ.ಎಂ.ಪಿ. (ಜಂಟಿ ನಿರ್ದೇಶಕರು–(ಸಾಂಖ್ಯಿಕ) ಕೇಂದ್ರ ಕಛೇರಿ)	1	
	ಬಿ) ಸಹಾಯಕ ನೋಡಲ್ ಅಧಿಕಾರಿ, ಕೇಂದ್ರ ಕಛೇರಿ ಬಿ.ಬಿ.ಎಂ.ಪಿ. (ಸಹಾಯಕ ಸಾಂಖ್ಯಿಕ ಅಧಿಕಾರಿ)	1	2
9	ಮೇಲ್ವಿಚಾರಕರು + 5% ಮೀಸಲು ಸೇರಿದಂತೆ (21,134 + 1056) (ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಮತ್ತು ಪೌರಾಡಳಿತ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಹಕಾರ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಕೃಷಿ ಇತ್ಯಾದಿ ಇಲಾಖೆಗಳ ಕ್ಷೇತ್ರ ಸಿಬ್ಬಂದಿ)		22,190

10	ಗಣತಿದಾರರು + 5% ಮೀಸಲು ಸೇರಿದಂತೆ (1,26,800 + 6,340) (ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯ ಶಿಕ್ಷಕರು)		1,33,140
11	ಸಂಪನ್ಮೂಲ ವ್ಯಕ್ತಿ (ಜಿಲ್ಲೆಗೆ ತಲಾ 1 + ಬಿಬಿಎಂಪಿ 5) (ಅರ್ಥಿಕ ಮತ್ತು ಸಾಂಖ್ಯಿಕ, ಶಿಕ್ಷಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಯಲ್ಲಿ ಗುಂಪು 'ಎ' ಅಥವಾ ಗುಂಪು 'ಬಿ' ಶ್ರೇಣಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಅಧಿಕಾರಿಗಳು– ಆಯ್ಕೆ ನಂತರ)		35
12	ಮಾಸ್ಟರ್ ತರಬೇತುದಾರರು (ಜಾರ್ಜ್ ಹಂತದಲ್ಲಿ ತರಬೇತಿಗಾಗಿ) ಸಾಂಖ್ಯಿಕ, ಕಂದಾಯ ಹಾಗೂ ಶಿಕ್ಷಣ ಇಲಾಖೆಯ ಸೇವಾ ನಿರತ ಅಥವಾ ನಿವೃತ್ತ ಗ್ರೂಪ್ 'ಎ' ಅಥವಾ 'ಬಿ' ಅಧಿಕಾರಿಗಳು.		2588
13	ಡೆಸಿಗ್ನೇಟೆಡ್ ಸಿಬ್ಬಂದಿ (ಪ್ರದಸ. (49) + ದ್ವಿದ. ಸಹಾಯಕರು/ಡಾಟಾ ಎಂಟ್ರಿ ಅಪರೇಟರ್ (49)–ನಿವೃತ್ತ ಸಿಬ್ಬಂದಿ ಆಯ್ಕೆ ನಂತರ (ಪ್ರಧಾನ ಸಮೀಕ್ಷಾಧಿಕಾರಿಗಳ ಕಛೇರಿಯಲ್ಲಿ)		98
	ಆಯುಕ್ತರು, ಬಿಬಿಎಂಪಿ, ಕಛೇರಿ	1	
	ವಲಯ ಜಂಟಿ ಆಯುಕ್ತರು, ಬಿಬಿಎಂಪಿ ಕಛೇರಿ	8	
	ಆಯುಕ್ತರು ಮಹಾನಗರ ಪಾಲಿಕೆ ಕಛೇರಿ	10	
	ಜಿಲ್ಲಾಧಿಕಾರಿಗಳ ಕಛೇರಿ	30	
14	ಡೆಸಿಗ್ನೇಟೆಡ್ ಸಿಬ್ಬಂದಿ (ದ್ವಿದ.ಸಹಾಯಕರು/ಡಾಟಾ ಎಂಟ್ರಿ ಅಪರೇಟರ್ (ಜಾರ್ಜ್ ಅಧಿಕಾರಿಗಳ ಕಛೇರಿ)		727
	ತಾಹಸೀಲ್ದಾರ್–ಗ್ರೇಡ್1	176	
	ಕಂದಾಯ ಅಧಿಕಾರಿಗಳು, ಬಿಬಿಎಂಪಿ ಕಛೇರಿ	199	
	ಕಂದಾಯ ಅಧಿಕಾರಿಗಳು 10 ಮಹಾನಗರ ಪಾಲಿಕೆ ಕಛೇರಿ	144	
	ಆಯುಕ್ತರು ನಗರ ಸಭೆ ಕಛೇರಿ	41	
	ಮುಖ್ಯಾಧಿಕಾರಿ ಪುರಸಭೆ (ಟಿಎಂಸಿ) ಕಛೇರಿ	94	
	ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯ್ತಿ	68	
	ಅಧಿಸೂಚಿತ ಪ್ರದೇಶಗಳು	5	
	ಒಟ್ಟು		1,60,289